

# ‘ಸುಧಾ’ ಕಾಳಜಿ

ದೇವರಿಲ್ಲದ ಜಾಗವುಂಟೆ ಎನ್ನುವುದು ಕನಕದಾಸರಿಗೆ ತಮ್ಮ ಗುರುಗಳಿಂದ ಎದುರಾದ ಪ್ರಶ್ನೆ. ಇಂದಿನ ‘ಡಿಜಿಟಲ್‌ದಾಸ’ರಿಗೆ ದೇವರ ಸ್ಥಾನದಲ್ಲಿ ಮೊಬೈಲ್ ಕಾಣಿಸಬಹುದು. ಸಂಪೂರ್ಣ ಸಾಕ್ಷರತೆಯ ಗುರಿ ಸಾಧ್ಯವಾಗದೆ ಹೋದ ಪ್ರದೇಶಗಳಲ್ಲೂ ‘ಇ–ಸಾಕ್ಷರತೆ’ ಹೆಚ್ಚೂಕಡಿಮೆ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗಿದೆ. ಜನಸಂಖ್ಯೆಗಿಂತಲೂ ಮೊಬೈಲ್‌ಗಳ ಸಂಖ್ಯೆ ಹೆಚ್ಚಾಗಿದೆ. ಅಮೃತ ಮಂಥನದಲ್ಲಿ ಕಾರ್ಕೋಟಕ ವಿಷ ಜನಿಸಿದಂತೆ, ಡಿಜಿಟಲ್ ಬಳಕೆಯ ಅನುಕೂಲಗಳೊಂದಿಗೆ ವಂಚನೆಗಳು ಹೆಚ್ಚುತ್ತಿವೆ. ಹಣದ ಜೊತೆಗೆ ಮಾನವನ್ನೂ ಗುರಿಯಾಗಿಸಿಕೊಂಡು ಸೈಬರ್ ವಂಚನೆಗಳು ನಡೆಯುತ್ತಿವೆ. ಈ ಸೈಬರ್ ಗಾಳಗಳಿಂದ ದೂರವಿರುವುದು ಹೇಗೆ? ಸೈಬರ್ ಸುರಕ್ಷತೆಗೆ ಸಂಬಂಧಿಸಿದಂತೆ, ಮೊಬೈಲ್ ಒಳಗೊಂಡಂತೆ ಡಿಜಿಟಲ್ ಸಲಕರಣೆಗಳನ್ನು ಬಳಸುವವರು ಅರಿತಿರಬೇಕಾದ ಪ್ರಾಥಮಿಕ ಸಂಗತಿಗಳೇನು?

ಇದು ಡಿಜಿಟಲ್ ಬಳಕೆದಾರರೆಲ್ಲರಿಗೂ ಉಪಯುಕ್ತವಾದ ಮಾಹಿತಿ.

■ ಸುಧೀಂದ್ರ ಪ್ರಸಾದ್ ಇ.ಎಸ್.